ದಿನಾಂಕಃ 11.12.2019 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ಮಾಡಿಸಲಾಯಿತು.

ಪಾಟೀ ಸವಾಲುಃ ಅರೋಪಿ ಪರ ವಕೀಲರಿಂದಃ

ನಾನು ಈಗಲೂ ಡಿಪೇನ್ಸ್‌ನಲ್ಲಿ ಕೆಲಸ ಮಾಡುತ್ತಿದ್ದೇನೆ. ಆರೋಪಿಯವರು 2014-2015ರಲ್ಲಿ ನನ್ನ ಸಂಬಂದಿಕರಾದ ನರಸಿಂಹ ಹಾಗೂ ನರಸಪ್ಪರವರ ಮೂಲಕ ಪರಿಚಯವಾಗಿರುತ್ತಾರೆ. ನನ್ನ ಬಾವ ಬಾಲಕೃಷ್ಣರವರು ಬಿಎಂಟಿಸಿಯಲ್ಲಿ ಕೆಲಸ ಮಾಡುತ್ತಿದ್ದಾರೆ. ಆರೋಪಿಯವರ ಪರಿಚಯವಾದ ನಂತರ ಅವರು ಬಿಎಂಟಿಸಿಯಲ್ಲಿ ಕೆಲಸ ಮಾಡುತ್ತಿದ್ದೇನೆಂದು ನನಗೆ ತಿಳಿಸಿದರು. ನರಸಿಂಹ ಹಾಗೂ ನರಸಪ್ಪರವರು ಸಹ ಡಿಪೇನ್ಸ್‌ನಲ್ಲಿ ಕೆಲಸ ಮಾಡುತ್ತಿದ್ದಾರೆ. ನರಸಿಂಹ ಹಾಗೂ ನರಸಪ್ಪರವರ ಮನೆ ಆರೋಪಿಯವರ ಮನೆಯ ಹತ್ತಿರವಿದೆಯೆಂದರೆ ಸರಿ.

ಜುಲೈ 2017ರಂದು ಆರೋಪಿಯವರು ಅವರ ಮನೆ ಕಟ್ಟುವ ಸಲುವಾಗಿ ಹಣವನ್ನು ನನ್ನಿಂದ ಪಡೆದುಕೊಂಡಿರುತ್ತಾರೆ. ಅದರ ಪೂರ್ವದಲ್ಲಿಯೇ ಹಣ ಬೇಕೆಂದು ಆರೋಪಿಯವರು ನನ್ನನ್ನು ಕೇಳಿದರು. ಜುಲೈ 2017ರ 2 ವರ್ಷದ ಹಿಂದೆ ಆರೋಪಿಯವರು ನನ್ನ ಬಳಿಯಿಂದ ರೂ 10 ಸಾವಿರ ಹಣ ಪಡೆದುಕೊಂಡು ಅದನ್ನು ಅವರು ಹಿಂದುರುಗಿಸಿರುತ್ತಾರೆ. ಸದರಿ ರೂ 10 ಸಾವಿರ ಹಣವನ್ನು ಆರೋಪಿಯವರು ಚೆಕ್ಕಿನ ಮೂಲಕ ನನಗೆ ಹಿಂದುರುಗಿಸಿದ್ದು ಅದು ನಗದೀಕರಣ ಗೊಂಡಿರುತ್ತದೆ. ಸದರಿ ಚೆಕ್ಕಿನ ಸಂಖ್ಯೆ ನನಗೆ ಈಗ ಹೇಳಲು ಅಗುವುದಿಲ್ಲ, ಅದು ಆರೋಪಿಯವರ ಪಾಸ್ ಪುಸ್ತಕದಲ್ಲಿ ನಮೂದು ಇರಬಹುದು.

ಜುಲೈ 2017ರಂದು ನನ್ನ ಬಳಿ ಹಣವಿತ್ತು ಎಂದು ತೋರಿಸಲು ಯಾವುದೇ ದಾಖಲೆ ನ್ಯಾಯಾಲಯಕ್ಕೆ ಹಾಜರು ಪಡಿಸಿರುವುದಿಲ್ಲ. ಜುಲೈ 2017ರಂದು ನಾನು ರೂ 3 ಲಕ್ಷ ಹಣವನ್ನು 2 ಬಾರಿಯಂತೆ ಅಂದರೆ ಒಮ್ಮೆ ರೂ 1 ಲಕ್ಷ ಮತ್ತೊಮ್ಮೆ ರೂ 2 ಲಕ್ಷ ಹಣವನ್ನು ಆರೋಪಿಯವರಿಗೆ ನೀಡಿರುತ್ತೇನೆ. ರೂ 3 ಲಕ್ಷದಲ್ಲಿ ರೂ 2 ಲಕ್ಷ ಹಣವನ್ನು ನಾನು ನನ್ನ ದೊಡ್ಡ ಅಕ್ಕನಿಂದ ಪಡೆದುಕೊಂಡಿದ್ದ ಹಣವಾಗಿರುತ್ತದೆ. ರೂ 1 ಲಕ್ಷ ಹಣ ನನ್ನ ಮನೆಯಲ್ಲಿ ನನ್ನ ಬಳಿಯಿತ್ತು, ಸದರಿ ರೂ 1 ಲಕ್ಷ ಹಣ ನಾನು ವಿತ್‌ಡ್ರಾ ಮಾಡಿದ ಹಣವಾಗಿರುತ್ತದೋ ಇಲ್ಲವೋ ನನಗೆ ಗೊತ್ತಿಲ್ಲ, ಸಾಕ್ಷಿಯು ಸದರಿ ರೂ 1 ಲಕ್ಷ ಹಣ ನಾನು ಡ್ರಾ ಮಾಡಿ ತಂದ ಹಣವಾಗಿತ್ತು ಎಂದು ಪುನಃ

ಹೇಳುತ್ತಾರೆ. ಆರೋಪಿಯವರಿಗೆ ಹಣವನ್ನು ಕೊಡಬೇಕೆನ್ನುವ ಉದ್ದೇಶದಿಂದಲೇ ನಾನು ಅಕ್ಕನ ಬಳಿಯಿಂದ ರೂ 2 ಲಕ್ಷ ಹಣ ಪಡೆದುಕೊಂಡಿದ್ದೇನು. ರೂ 1 ಲಕ್ಷ ಹಣವನ್ನು ನಾನು ಆರೋಪಿಯವರಿಗೆ ಕೊಟ್ಟ ನಂತರ ಅವರು ಪುನಃ 2 ಲಕ್ಷ ಹಣ ಬೇಕೆಂದು ಕೇಳಿದಾಗ ನಾನು ನನ್ನ ಅಕ್ಕನಿಂದ ಪಡೆದು ಅದನ್ನು ಆರೋಪಿಯವರಿಗೆ ನೀಡಿರುತ್ತೇನೆ. ನರಸಪ್ಪ ಹಾಗೂ ನರಸಿಂಹರವರ ಹೇಳಿಕೆಯ ಮೇರೆಗೆ ನಾನು ಆರೋಪಿಗೆ ಹಣವನ್ನು ಕೊಟ್ಟಿರುತ್ತೇನೆ. ರೂ 1 ಲಕ್ಷ ಹಣ ಕೊಟ್ಟ 2-3 ದಿನಗಳ ನಂತರ ನಾನು ರೂ 2 ಲಕ್ಷ ಹಣವನ್ನು ಕೊಟ್ಟಿರುತ್ತೇನೆ. ರೂ 2 ಲಕ್ಷ ಹಣವನ್ನು ನನ್ನ ಅಕ್ಕ ನನಗೆ ನಗದಾಗಿ ನೀಡಿರುತ್ತಾರೆ. ನನ್ನ ಅಕ್ಕ ಎಸ್‌ವಿ ಎಂಟರ್‌ಪ್ರೈಸಸ್‌ನ ಪ್ರೊಪ್ರೈಟರ್ ಆಗಿರುತ್ತಾರೆ. ನಾನು ಕೇಳಿದ ದಿನವೇ ನನ್ನ ಅಕ್ಕ ನನಗೆ ನಗದಾಗಿ ರೂ 2 ಲಕ್ಷ ಹಣವನ್ನು ಕೊಟ್ಟಿರುತ್ತಾರೆ.

ರೂ 1 ಲಕ್ಷ ಹಣ ಒಮ್ಮೆ ರೂ 2 ಲಕ್ಷ ಹಣ ಮತ್ತೊಮ್ಮೆ ಆರೋಪಿಯವರಿಗೆ 2 ಬಾರಿ ಹಣ ನೀಡಿರುವ ವಿಚಾರ ಹಾಗೂ ರೂ 2 ಲಕ್ಷ ಹಣವನ್ನು ನನ್ನ ಅಕ್ಕನಿಂದ ಪಡೆದುಕೊಂಡಿರುವ ವಿಚಾರ ನನ್ನ ದೂರು, ನೋಟೀಸು ಹಾಗೂ ಸಾಕ್ಷಿ ಹೇಳಿಕೆಯಲ್ಲಿ ತಿಳಿಸಿರುವುದಿಲ್ಲ ಎಂದರೆ ಸರಿ. 2016ರ ನವೆಂಬರ್ ತಿಂಗಳಲ್ಲಿ ಡಿಮಾನಿಟರೈಷನ್ ಆಗಿರುವ ವಿಚಾರ ನನಗೆ ಗೊತ್ತಿದೆ. ಅಲ್ಲಿಂದ 1 ವರ್ಷದ ತನಕ ರೂ 50 ಸಾವಿರಕ್ಕಿಂತ ಹೆಚ್ಚಿನ ಹಣ ನಗದಾಗಿ ವ್ಯವಹಾರ ಮಾಡುವ ಬಗ್ಗೆ ಇರಲಿಲ್ಲ ಎಂದರೆ ಸರಿಯಲ್ಲ. ಡಿಮಾನಿಟರೈಷನ್ ಆದ ಕಾರಣ ರೂ 3 ಲಕ್ಷ ಹಣದಲ್ಲಿ ರೂ 2 ಲಕ್ಷ ಹಣ ನನ್ನ ಅಕ್ಕನಿಂದ ಪಡೆದುಕೊಟ್ಟಿರುತ್ತೇನೆಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ಆರೋಪಿಯವರಿಗೆ ನಾನು 3 ಲಕ್ಷ ಹಣವನ್ನು ಕೊಟ್ಟಿರಲಿಲ್ಲ ಎಂದರೆ ಸರಿಯಲ್ಲ. ನನ್ನ ಬಳಿ ರೂ 3 ಲಕ್ಷ ಹಣ ಆ ಸಮಯದಲ್ಲಿ ಇರಲಿಲ್ಲ ಎಂದರೆ ಸರಿಯಲ್ಲ. 2017ರಲ್ಲಿ ಆರೋಪಿಯವರು ಮನೆ ಕಟ್ಟಲಿಲ್ಲ ಎಂದರೆ ಸರಿಯಲ್ಲ. ಈ ಪ್ರಕರಣದ ಸಲುವಾಗಿ ಮನೆ ಕಟ್ಟುವ ಸಲುವಾಗಿ ಆರೋಪಿಯವರು ಹಣ ಪಡೆದಿದ್ದರು ಎಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ.

ನರಸಪ್ಪ ಹಾಗೂ ನರಸಿಂಹರವರ ಮೂಲಕ ಆರೋಪಿಯವರು ನನ್ನ ಬಳಿ ಬಂದು 2016ರಲ್ಲಿ ರೂ 40 ಸಾವಿರ ಹಣವನ್ನು ಪಡೆದುಕೊಂಡಾಗ 4 ಖಾಲಿ ಚೆಕ್ಕುಗಳನ್ನು ನನಗೆ ಕೊಟ್ಟಿದ್ದರು ಎಂದರೆ

ಸರಿಯಲ್ಲ. ಸದರಿ 4 ಚೆಕ್ಕುಗಳಲ್ಲಿ 2 ಚೆಕ್ಕುಗಳನ್ನು ನಾನು ಪಡೆದು ಉಳಿದ 2 ಚೆಕ್ಕುಗಳು ನರಸಪ್ಪರವರ ಬಳಿಯಿದೆಯೆಂದರೆ ಸರಿಯಲ್ಲ. ನರಸಪ್ಪರವರಿಗೆ ಅರೋಪಿಯವರು 2018ರಂದು ಒಂದು ಚೆಕ್ಕನ್ನು ಕೊಟ್ಟಿರುತ್ತಾರೆ. ಸಾಕ್ಷಿಗೆ ಅರೋಪಿಯವರ ಪಾಸ್ ಪುಸ್ತಕವನ್ನು ತೋರಿಸಿ ಅದರಲ್ಲಿ ರೂ 10 ಸಾವಿರ ಹಣವನ್ನು ಅರೋಪಿಯವರಿಂದ ಅವರು ಪಡೆದಿರುವುದಾಗಿ ಒಪ್ಪಿಕೊಳ್ಳುತ್ತಾರೆ ಸದರಿ ಪಾಸ್ ಪುಸ್ತಕವನ್ನು ನಿಡಿ1 ಎಂದು ಹಾಗೂ ದಿಃ 17.11.2016ರ ವ್ಯವಹಾರದ ಬಾಗವನ್ನು ನಿಡಿ1ಎ ಎಂದು ಗುರುತಿಸಲಾಯಿತು. ರೂ 40 ಸಾವಿರದ ವ್ಯವಹಾರಕ್ಕೆ ಸಂಬಂದಪಟ್ಟಂತೆ ಅರೋಪಿಯವರು 4 ಖಾಲಿ ಚೆಕ್ಕುಗಳನ್ನು ಕೊಟ್ಟಿದ್ದರು ಎಂದರೆ ಸರಿಯಲ್ಲ. 2016ರ ಜುಲೈ ತಿಂಗಳಲ್ಲಿ ರೂ 40 ಸಾವಿರ ವ್ಯವಹಾರದ ಸಮಯದಲ್ಲಿ ಖಾಲಿ ಇ ಸ್ಟಾಂಪ್‌ನಲ್ಲಿ ಸಹಿ ಮಾಡಿ ಅರೋಪಿಯವರು ನನಗೆ ಕೊಟ್ಟಿದ್ದರು ಎಂದರೆ ಸರಿಯಲ್ಲ. 4 ಚೆಕ್ಕುಗಳಲ್ಲಿ ಒಂದು ಚೆಕ್ಕನ್ನು ರೂ 10 ಸಾವಿರಕ್ಕೆ ನಾನು ಡ್ರಾ ಮಾಡಿಕೊಂಡಿರುತ್ತೇನೆಂದರೆ ಸರಿಯಲ್ಲ. ಸಾಕ್ಷಿಯು ರೂ 10 ಸಾವಿರ ಮೊತ್ತಕ್ಕೆ ಅರೋಪಿಯವರು ಒಂದು ಚೆಕ್ಕನ್ನು ನೀಡಿದ್ದು ಅದರ ವ್ಯವಹಾರ ಮುಗಿದಿರುತ್ತದೆಂದು ಹೇಳುತ್ತಾರೆ. ರೂ 10 ಸಾವಿರ ಹಣವನ್ನು ಚೆಕ್ಕು ಸಂಃ 839080 ಮೂಲಕ ನಾನೇ ಡ್ರಾ ಮಾಡಿರುತ್ತೇನೆ.

ಚೆಕ್ಕು ಸಂಃ 839080, ವಿವಾದಿತ ಚೆಕ್ಕನ್ನು ಹಾಗೂ ಇನ್ನುಳಿದ ಎರಡು ಚೆಕ್ಕುಗಳನ್ನು 2016ರಲ್ಲಿಯೇ ನಾನು ಅರೋಪಿಯವರಿಂದ ಪಡೆದುಕೊಂಡಿದ್ದೇನು ಎಂದರೆ ಸರಿಯಲ್ಲ. ಚೆಕ್ಕು ಸಂಃ 839080 ಹಾಗೂ ವಿವಾದಿತ ಚೆಕ್ಕು ಸಂಃ839077 ಹಿಂದೆ ಮುಂದೆ ಕ್ರಮ ಸಂಖ್ಯೆಯ ಚೆಕ್ಕುಗಳಾಗಿದೆಯೆಂದರೆ ಸರಿ. ಈ ಎರಡು ಚೆಕ್ಕು ಸಂಖ್ಯೆಗಳ ಮದ್ಯದ ಚೆಕ್ಕು ಮತ್ತು ವಿವಾದಿತ ಚೆಕ್ಕಿನ ಹಿಂದಿನ ಚೆಕ್ಕು ಸಂಖ್ಯೆಯ ಚೆಕ್ಕು ಚೆಕ್ಕು ಲೀಪ್ ನನ್ನ ಹಾಗೂ ನರಸಿಂಹ ಅಥವಾ ನರಸಪ್ಪರವರ ಬಳಿ ಇದೆಯೆಂದರೆ ಸರಿಯಲ್ಲ. 2017ರಲ್ಲಿ ಆರೋಪಿಯವರು ಯಾವುದೇ ಮನೆಯನ್ನು ಕಟ್ಟಲು ಅರಂಬಿಸಿರಲಿಲ್ಲ ಎಂದರೆ ಸರಿಯಲ್ಲ. ಅದರ ಸಲುವಾಗಿ ರೂ 3 ಲಕ್ಷ ಹಣವನ್ನು ಅರೋಪಿಯವರು ನನ್ನಿಂದ ಪಡೆದುಕೊಂಡಿಲ್ಲ ಎಂದರೆ ಸರಿಯಲ್ಲ. ನನ್ನ ಅಕ್ಕನ ಬಳಿಯಿಂದ ರೂ 2 ಲಕ್ಷ ಹಣ ಪಡೆದುಕೊಂಡೇ ಎಂದು ಅವರನ್ನು ಸಾಕ್ಷಿ ಮಾಡಿಸಲು ನನಗೆ ಏನು ತೊಂದರೆಯಿಲ್ಲ. ರೂ 1 ಲಕ್ಷ ಹಣ ಅ ಸಮಯದಲ್ಲಿ ನನ್ನ ಬಳಿಯಿತ್ತು ಎಂದು ತೋರಿಸಲು ದಾಖಲೆ ಇದೆಯೋ

ಇಲ್ಲವೋ ನೋಡಬೇಕು. 2016ರಲ್ಲಿ ಆರೋಪಿಯವರು ನೀಡಿದ 4 ಚೆಕ್ಕುಗಳಲ್ಲಿ ಒಂದು ಚೆಕ್ಕುನ್ನು ಈ ಪ್ರಕರಣದಲ್ಲಿ ದುರುಪಯೋಗ ಪಡಿಸಿಕೊಂಡು ಸುಳ್ಳು ದೂರನ್ನು ಆರೋಪಿಯವರ ವಿರುದ್ದ ಸಲ್ಲಿಸಿರುತ್ತೇನೆಂದರೆ ಸರಿಯಲ್ಲ. ವಿವಾದಿತ ಚೆಕ್ಕು ನನಗೆ ಖಾಲಿ ಚೆಕ್ಕಾಗಿ ಆರೋಪಿಯವರು ನೀಡಿರಲಿಲ್ಲ.

ಆರೋಪಿಯವರು ಎಲ್ಲಿಯವರೆಗೆ ವಿದ್ಯಾಭ್ಯಾಸ ಮಾಡಿರುತ್ತಾರೆ ನನಗೆ ಗೊತ್ತಿಲ್ಲ. ಆರೋಪಿಯವರು ವೈಯಕ್ತಿಕವಾಗಿ ನನಗೆ ಪರಿಚಯವಿರುವುದಿಲ್ಲ. ಆರೋಪಿಯವರಿಗೆ ಆಂಗ್ಲಭಾಷೆ ಒದಲು ಬರೆಯಲು ಬರುವುದಿಲ್ಲ ಎನ್ನುವ ವಿಚಾರ ನನಗೆ ಗೊತ್ತಿಲ್ಲ. ವಿವಾದಿತ ಚೆಕ್ಕಿನಲ್ಲಿ ಯಾರು ಬರವಣಿಗೆ ಮಾಡಿರುತ್ತಾರೆ ನನಗೆ ಗೊತ್ತಿಲ್ಲ. ವಿವಾದಿತ ಚೆಕ್ಕಿನ್ನು ಆರೋಪಿಯವರು ಅವರ ಮನೆಯಲ್ಲಿ ನರಸಿಂಹ, ನರಸಪ್ಪ ಹಾಗೂ ಅವರ ಹೆಂಡತಿಯ ಸಮಕ್ಷಮದಲ್ಲಿ ನನಗೆ ಕೊಟ್ಟಿರುತ್ತಾರೆ. ನಾನು 2 ಬಾರಿ ಹಣವನ್ನು ನರಸಪ್ಪರವರ ಸಮಕ್ಷಮದಲ್ಲಿಯೇ ಆರೋಪಿಯವರಿಗೆ ಅವರ ಮನೆಯಲ್ಲಿಯೇ ಕೊಟ್ಟಿರುತ್ತೇನೆ. ರೂ 3 ಲಕ್ಷ ಹಣವನ್ನು ಆರೋಪಿಯವರಿಗೆ ಕೊಟ್ಟಾಗ ಬದ್ರತೆಗಾಗಿ ಅವರಿಂದ ಆ ಸಮಯದಲ್ಲಿ ಏನನ್ನು ಪಡೆದುಕೊಂಡಿಲ್ಲ. ಆರೋಪಿಯವರು ಕಟ್ಟಿದ ಮನೆಯನ್ನು ನನಗೆ ಹಾಗೂ ನರಸಪ್ಪರವರ ಸಂಬಂದಿಕರಿಗೆ ಬೋಗ್ಯಕ್ಕೆ ಕೊಡುತ್ತೇವೆನ್ನುವ ವ್ಯವಹಾರ ಮಾಡಿ ನನ್ನಿಂದ ಹಣವನ್ನು ಪಡೆದುಕೊಂಡಿರುತ್ತಾರೆ. ನಾನು ಮೊದಲು ಯಲಹಂಕದ ಬಳಿ ಹೊನ್ನೇಹಳ್ಳಿಯಲ್ಲಿದ್ದೇನು. ಏಪ್ರಿಲ್ 2017ರಂದು ಹೊನ್ನೇನಹಳ್ಳಿಯ ಬಾಡಿಗೆ ಮನೆ ಖಾಲಿ ಮಾಡಿ ದೂರಿನಲ್ಲಿ ತಿಳಿಸಿರುವ ವಿಳಾಸಕ್ಕೆ ಬಂದೆವು. ಆರೋಪಿಯವರು ಹಣವನ್ನು ನನಗೆ ಯಲಹಂಕದ ಬಸ್ ನಿಲ್ದಾಣದಲ್ಲಿ ಕೇಳಿದರು. ರೂ 40 ಸಾವಿರ ಹಣ ಆರೋಪಿಯವರು ನನಗೆ ಹಿಂದುರುಗಿಸಿದ್ದರೂ ಸಹಿತ ವಿವಾದಿತ ಚೆಕ್ಕನ್ನು ದುರುಪಯೋಗ ಪಡಿಸಿಕೊಂಡು ರೂ 3 ಲಕ್ಷಕ್ಕೆ ಅವರ ವಿರುದ್ದ ಪ್ರಕರಣ ದಾಖಲಿಸಿರುತ್ತೇನೆಂದರೆ ಸರಿಯಲ್ಲ. ರೂ 40 ಸಾವಿರ ಹಣದ ವ್ಯವಹಾರ ಮುಗಿದ ಬಳಿಕ ಚೆಕ್ಕನ್ನು ಹಿಂದಕ್ಕೆ ಕೊಡಿಯೆಂದು ಆರೋಪಿಯವರು ಕೇಳಿದಾಗ ಅದು ನರಸಿಂಹ ಹಾಗೂ ನರಸಪ್ಪರವರ ಬಳಿಯಿದೆಯೆಂದು ಹೇಳಿ ಚೆಕ್ಕನ್ನು ಹಿಂದಕ್ಕೆ ಕೊಡಲಿಲ್ಲ ಎಂದರೆ ಸರಿಯಲ್ಲ. ಚೆಕ್ಕನ್ನು ಒಮ್ಮೆ ಬ್ಯಾಂಕಿಗೆ ಹಾಜರು ಪಡಿಸಿ ಅದು ಹಿಂದಕ್ಕೆ ಬಂದ ನಂತರ ಆರೋಪಿಯವರಿಗೆ ತಿಳಿಸಿ ಒಂದು ತಿಂಗಳ ನಂತರ ಪುನಃ ಬ್ಯಾಂಕಿಗೆ

ನಗದೀಕರಣಕ್ಕೆ ಹಾಜರು ಪಡಿಸಿದ್ದೇನೆಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ಆರೋಪಿ ಹಾಗೂ ನರಸಿಂಹ ಮತ್ತು ನರಸಪ್ಪರವರ ನಡುವೆ ಮನಸ್ತಾಪವಿದ್ದು ನರಸಿಂಹ ಹಾಗೂ ನರಸಪ್ಪರವರು ನನ್ನ ಮೂಲಕ ಆರೋಪಿಯವರ ವಿರುದ್ದ ಈ ಪ್ರಕರಣ ದಾಖಲಿಸಿರುತ್ತಾರೆಂದರೆ ಸರಿಯಲ್ಲ. ನಿಪಿ7 ಅಂಚೆ ಸ್ವೀಕೃತಿ ಪತ್ರದಲ್ಲಿರುವ ಸಹಿ ಆರೋಪಿಯವರದ್ದು ಹಾಗೂ ಅವರ ಮನೆಯವರದ್ದು ಆಗಿರುವುದಿಲ್ಲ ಎಂದರೆ ನನಗೆ ಗೊತ್ತಿಲ್ಲ. ನಿಪಿ7ನ್ನು ನಾನೇ ಸೃಷ್ಟಿಸಿ ಹಾಜರು ಪಡಿಸಿರುತ್ತೇನೆಂದರೆಸ ರಿಯಲ್ಲ. ವಿವಾದಿತ ಚೆಕ್ಕನ್ನು ಹೊರತುಪಡಿಸಿ ಇನ್ನು 2 ಚೆಕ್ಕು ನನ್ನ ಹಾಗೂ ನರಸಪ್ಪರವರ ಬಳಿ ಇದೆಯೆಂದರೆ ಸರಿಯಲ್ಲ. ನರಸಿಂಹ ಹಾಗೂ ನರಸಪ್ಪರವರನ್ನು ಸಾಕ್ಷಿಯಾಗಿ ವಿಚಾರಿಸಲು ನನಗೆ ಏನು ತೊಂದರೆಯಿಲ್ಲ. ನಾನು ಯಾವುದೇ ದಾಖಲೆಯನ್ನು ಹಾಜರು ಪಡಿಸದ ಕಾರಣ ಆರೋಪಿಯವರಿಗೆ ರೂ 3 ಲಕ್ಷ ಹಣವನ್ನು ಕೊಟ್ಟಿರುವುದಿಲ್ಲ ಎಂದರೆ ಸರಿಯಲ್ಲ. ಸದರಿ ರೂ 3 ಲಕ್ಷ ಹಣವಿತ್ತು ಎಂದು ತೋರಿಸಲು ದಾಖಲೆ ಹಾಜರು ಪಡಿಸಲು ತೊಂದರೆಯಿಲ್ಲ. ಆರೋಪಿಗೆ ತೊಂದರೆ ಕೊಡುವ ಉದ್ದೇಶದಿಂದ ಸುಳ್ಳು ದೂರು ಸಲ್ಲಿಸಿರುತ್ತೇನೆಂದರೆ ಸರಿಯಲ್ಲ. ಬೇರೆಯವರ ವಿರುದ್ದ ಸಹ ಹಣಕ್ಕಾಗಿ ಸುಳ್ಳು ದೂರುಗಳನ್ನು ಸಲ್ಲಿಸಿರುತ್ತೇನೆಂದರೆ ಸರಿಯಲ್ಲ. ಸುಳ್ಳು ಸಾಕ್ಷಿ ಹೇಳುತಿತದ್ದೇನೆಂದರೆ ಸರಿಯಲ್ಲ. ಮರು ವಿಚಾರಣೆ ಇಲ್ಲ.

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ ಹೇ ಕೇ ಸ ಇದೆ

17ನೇ ಅಪರ ನ್ಯಾಯಾಧೀಶರು
ಮತ್ತು ಎಸಿಎಂಎಂ